


ಎಡದಿಂದ ಬಲಕ್ಕೆ :

1. ಜರ್ಜರಿತನಂತೆ ನರಳುವ ಗುಣ ಅವನಿಗೆ ಹುಟ್ಟಿನಿಂದಲೇ ಬಂದಿದೆ (4)
3. ಈ ನೂತನ ವಿಧಾನದಲ್ಲಿ ತುಂಬ ಕಡಿಮೆ ವೇಗ (3)
4. ನಾಳೆಯ ಕೆಲಸಕ್ಕೆಂದು ತಂದಿದ್ದ ಕೊಳವೆ ಎಲ್ಲಿ ? (3)
6. ಮಿತ್ರರ ಪ್ರೇರಣೆಯಿಂದ ನಡೆದದ್ದು ಈ ವಿವಾಹ (4)
8. ಸಂಕಟಕ್ಕೆ ಸಿಲುಕಿದ ಆತನ ಚಿತ್ತ ಕಿಂಚಿತ್ತೂ ಅರಳಿಲ್ಲ (4)
10. ತಳ್ಳುತ್ತ ತಳ್ಳುತ್ತಲೇ ತಲುಪಿದ್ದು ಕಟ್ಟಕಡೆಯ ಪಾತಾಳ ಲೋಕ (4)
12. ಭಾರೀ ಮರವನ್ನೇರುವ ಆಸೆ ಕಡೆಗೂ ಕೈಗೂಡಿತು (4)
16. ಮೂರ್ಖನೇನಲ್ಲ ಬಿಡಿ, ಆತ ಕುಲುಮೆ ಕೆಲಸಗಾರ (3)
17. ಪ್ರಯತ್ನ ವಿಫಲವಾದದ್ದಕ್ಕೆ ಈ ಕಳಾಹೀನತೆ (3)
18. ಹೆದ್ದಾರಿಯ ಬಳಿಯಲ್ಲೇ ಹಳ್ಳ ಕೊಳ್ಳಗಳ ಮೂಲಕ ಒಂದು ಗುಪ್ತ ಮಾರ್ಗ (4)

ಮೇಲಿಂದ ಕೆಳಕ್ಕೆ :

1. ಜನ್ಮವನ್ನು ನೀಡಿದವಳು ಇದೇ ಮಾತೆ (3)
2. ಕತ್ತಲೆಯನ್ನು ನಿವಾರಿಸುವ ವರೆಗೂ... (3)
3. ನಿಮ್ಮದೇ ಹಣ ವ್ಯಯಿಸಿದ್ದು ಈ ರಚನೆ (3)
5. ಕುಣಿಕೆ ಎಳೆವಂತೆ ನಟಿಸಿ ಕೋಪ ಬರಿಸು (3)
6. ವಿಪರೀತವೇನಿಲ್ಲ, ಸುತ್ತುವರಿಯಲ್ಪಟ್ಟಿದೆ ಅಷ್ಟೆ (4)
7. ಯಾವುದೋ ಕಾಲದಲ್ಲಿದ್ದ ಕೃಷ್ಣನ ವಂಶ (4)
8. ಸೊಂಪಾದ ಸಸ್ಯಗಳನ್ನೆಲ್ಲ ಮಾರಿ ಗಳಿಸಿದ್ದೇನು ? (4)
9. ಎಲ್ಲರನ್ನೂ ಕರೆತರುವ ತೀರ್ಮಾನ ಕುರಿತು ಅಡ್ಡಿ, ಆಕ್ಷೇಪ (4)
11. ವಕ್ರತೆಯನ್ನು ಸರಿಪಡಿಸಲು ಭಾರೀ ಆತುರ (3)
13. ರಾಜೀವನನ್ನು ಕುಗ್ಗಿಸಿದ ಮಂತ್ರಿಯೇ ತಲೆಕೆಳಗಾದ (3)
14. ಮೂರ್ಖರ ಈ ತೀರ್ಮಾನ ತುಂಬ ಅಪಾಯಕರ (3)
15. ವ್ಯಾಪಾರಕ್ಕೆ ತಯಾರಿ ಮಾಡಲೆಂದು ನಡೆದಿದೆ ದುರಸ್ತಿಯ ಕೆಲಸ (3)

## 20-09-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಉಪಾದಾನ ; 3. ಧರಣಿ; 4. ಗದ್ದಲ ; 6. ಸುಮಧುರ ; 7. ಸಂಕಟ ; 9. ಆಣತಿ ; 11. ಹಗಲು ; 13. ಸಭಿಕ ; 15. ಗಾಳಿಮಾತು ; 17. ಗರೀಬ; 18. ಮುನಿಸು ; 19. ರಿಪುಬಲ

ಮೇಲಿಂದ ಕೆಳಕ್ಕೆ :

1. ಉಣಿಸು ; 2. ನಗರ ; 3. ಧನಿಕ ; 5. ಲವಣ ; 7. ಸಂದೇಹ ; 8. ಟಪಾಲು ; 9. ಆಭಾಸ ; 10. ತಿರುಕ ;12. ಗಟ್ಟಿಗ ; 14. ಭಿರಸು ( = ಸುರಭಿ ತಲೆಕೆಳಗು); 15. ಗಾಬರಿ ; 16. ತುಮುಲ

ಪ್ರಶ್ನಾ ಂಕಣ

# ‘ಸಮುದ್ರ ಸಿಂಹ’: ಅದೆಂಥ ಪ್ರಾಣಿ?

ಸುಪ್ರಸಿದ್ಧ ಪ್ರಾಣಿಯಾದ ಸಿಂಹದ ( ಚಿತ್ರ1) ರೂಪವನ್ನೇ ಪಡೆದಿರುವ, ಅದರಂತೆಯೇ ಬಲಿಷ್ಠ ಬೇಟೆಗಾರನೇ ಆಗಿರುವ, ಆದರೆ ಸಾಗರವಾಸಿ ಆಗಿರುವ ಪ್ರಾಣಿಯೇ “ಸಮುದ್ರ ಸಿಂಹ” ( ಚಿತ್ರ3). ವಿಶೇಷವಾಗಿ, ಗಂಡು ಸಮುದ್ರ ಸಿಂಹಗಳ ಮುಖ, ಬಾಯಿ, ಕೊರಳ ಸುತ್ತಲ ಕೇಶ ರಾಶಿ, ಶರೀರ ಗಾತ್ರ, ಮೈ ಬಣ್ಣ... ಇತ್ಯಾದಿ ಹಲವಾರು ಪ್ರಧಾನ ದೇಹ ಲಕ್ಷಣಗಳು ಸಿಂಹಗಳ ಲಕ್ಷಣಗಳನ್ನೇ ಬಹುವಾಗಿ ಹೋಲುತ್ತವೆ ( ಚಿತ್ರ3 ರಲ್ಲಿ ಗಮನಿಸಿ ). ಹಾಗಾಗಿ ಸಮುದ್ರ ಸಿಂಹಗಳಿಗೆ ಈ ಹೆಸರು.

ಸಿಂಹಗಳಂತೆಯೇ ಸ್ತನಿ ವರ್ಗಕ್ಕೇ ಸೇರಿರುವ ಸಮುದ್ರ ಸಿಂಹ ವಾಸ್ತವವಾಗಿ ಕಡಲಲ್ಲಿ ಅದರ ಸಹಚರರೇ ಆಗಿರುವ 'ಸೀಲ್' (ಚಿತ್ರ2) ಮತ್ತು 'ವಾಲ್ರಸ್' ಗಳ ನಿಕಟ ಸಂಬಂಧಿ. ಉದ್ದನಾದ ಮತ್ತು ಶಕ್ತವಾದ 'ಈಜು ಕೈಕಾಲು'ಗಳನ್ನು (ಫ್ಲಿಪ್ಪರ್ಸ್) ಪಡೆದಿರುವ ಸಮುದ್ರ ಸಿಂಹಗಳು ಕಡಲಲ್ಲಿ ತಾಸಿಗೆ ನಲವತ್ತು ಕಿಲೋ ಮೀಟರ್ ಗಳ ಭಾರೀ ವೇಗದಲ್ಲಿ ಈಜಬಲ್ಲವು ; ಆರು ನೂರು ಅಡಿ ಆಳಕ್ಕೆ ಮುಳುಗಬಲ್ಲವು ; ಒಮ್ಮೆಗೆ ನಲವತ್ತು ನಿಮಿಷಗಳ ಕಾಲ ನೀರಿನಲ್ಲಿ ಮುಳುಗಿರಬಲ್ಲವು !

ಸಮುದ್ರ ಸಿಂಹಗಳಲ್ಲಿ ಪ್ರಸ್ತುತ ಆರು ಪ್ರಭೇದಗಳಿವೆ. ಅವುಗಳಲ್ಲೆಲ್ಲ “ಸ್ಟೆಲ್ಲಾರ್ ಸಮುದ್ರ ಸಿಂಹ”ದ್ದೇ ಅತ್ಯಧಿಕ ತೂಕ, ಗಾತ್ರ. ಈ ಪ್ರಭೇದದ ಗಂಡುಗಳು ಒಂದು ಟನ್ ತೂಕ ತಲುಪುತ್ತವೆ ; ಹನ್ನೊಂದು ಅಡಿ ಉದ್ದ ಬೆಳೆಯುತ್ತವೆ ! ಹೆಣ್ಣುಗಳದು ಐನೂರು ಕಿಲೋ ತೂಕ ; ಒಂಬತ್ತು ಅಡಿವರೆಗೆ ಉದ್ದ. ಸಮುದ್ರ ಸಿಂಹಗಳ ಆರು ಪ್ರಭೇದಗಳಲ್ಲಿ ಮೂರು ಪ್ರಭೇದಗಳು ಅಲ್ಪ ಸಂಖ್ಯೆಯಲ್ಲಿದ್ದು ಅಳಿವ ಅಪಾಯದಲ್ಲಿವೆ : “ ಆಸ್ಟ್ರೇಲಿಯನ್ ಸಮುದ್ರ ಸಿಂಹ, ನ್ಯೂಜಿಲ್ಯಾಂಡ್ ಸಮುದ್ರ ಸಿಂಹ ಮತ್ತು ಗ್ಯಾಲಪಗೋಸ್ ಸಮುದ್ರ ಸಿಂಹ”.




ಸಮುದ್ರ ಸಿಂಹಗಳ ಪ್ರಧಾನ ಆಹಾರ ಮತ್ಸ್ಯಗಳು. ಒಮ್ಮೆಗೆ ಅವು ಐವತ್ತರಿಂದ ಎಂಬತ್ತು ಕಿಲೋಗ್ರಾಂನಷ್ಟು ಆಹಾರವನ್ನು ಸೇವಿಸುತ್ತವೆ. ಈ ಪ್ರಾಣಿಗಳ ಆಯುರ್ಮಾನ ಇಪ್ಪತ್ತರಿಂದ ಮೂವತ್ತು ವರ್ಷ.

ಸಂತಾನ ವರ್ಧನೆಯ ಕಾಲದಲ್ಲಿ ಮಾತ್ರ ಸಮುದ್ರ ಸಿಂಹಗಳು ಕಡಲಿನಿಂದ ಹೊರಕ್ಕೆ ನೆಲಾವಾರಕ್ಕೆ ಬರುತ್ತವೆ. ದ್ವೀಪಗಳ ಸಾಗರದಂಚಿನಲ್ಲಿ ನೆಲದ ಮೇಲೆ ಗಂಡುಗಳು ಮತ್ತು ಪೂರ್ಣ ಗರ್ಭಿಣಿಯರಾದ ಹೆಣ್ಣುಗಳು ಭಾರೀ ಸಂಖ್ಯೆಯಲ್ಲಿ ಗುಂಪುಗೂಡುತ್ತವೆ. ಮರಿಗಳನ್ನು ಪ್ರಸವಿಸಿದ ಕೆಲ ದಿನಗಳಲ್ಲೇ ಹೆಣ್ಣುಗಳೆಲ್ಲ ಮತ್ತೆ ಗರ್ಭ ಧರಿಸುತ್ತವೆ. ಆ ವೇಳೆಗೆ ಮರಿಗಳೆಲ್ಲ ಕಡಲಿಗಿಳಿವ ಸಾಮರ್ಥ್ಯ ಪಡೆದಿರುತ್ತವೆ. ಹಾಗಾದೊಡನೆ ಗಂಡುಗಳು, ಹೆಣ್ಣುಗಳು ಮತ್ತು ಮರಿಗಳ ಇಡೀ ಗುಂಪು ಕಡಲಿಗೆ ಹಿಂದಿರುಗುತ್ತವೆ.

ಇದು ಸಮುದ್ರ ಸಿಂಹಗಳ ಜೀವನ ಕ್ರಮ.

■ ಎನ್. ವಾಸುದೇವ್